ಸರ್ವ ಶಿಕ್ಷಣ ಅಭಿಯಾನ
ಕರ್ನಾಟಕ
ಎಲ್ಲರೂ ಕಲಿಯೋಣ – ಎಲ್ಲರೂ ಬೆಳೆಯೋಣ
ಹೊಸ ಸಾರ್ವಜನಿಕ ಕಟ್ಟಡಗಳು, ಕೆ.ಆರ್. ವೃತ್ತ, ಬೆಂಗಳೂರು – 560 001

ಪ.ಸಂ: ಸ.ಶಿಅ/ಶೈ.ತ/ಸ.ಜಾ/ಎಸ್.ಡಿ.ಎಂ.ಸಿ. ಪು.ರ/2014-15 ದಿನಾಂಕ: 25.03.2015

# ಸುತ್ತೋಲೆ

ವಿಷಯ: ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ – 2009ರ ಅನ್ವಯ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಪುನರ್ರಚಿಸುವ ಬಗ್ಗೆ.

ಉಲ್ಲೇಖ 1) ಕರ್ನಾಟಕ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಡಿ 256 ಪಿಬಿಎಸ್ 2014, ದಿನಾಂಕ: 30.12.2014.

2) ಕರ್ನಾಟಕ ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ: ಇಡಿ 123 ಎಸ್‌ಟಿಬಿ 2012, ದಿನಾಂಕ: 18.12.2012.

3) ಕರ್ನಾಟಕ ಸರ್ಕಾರದ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಹಕ್ಕು ನಿಯಮಗಳು – 2012

-*@*@*@*@*@-

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (3)ರಲ್ಲಿ ಪ್ರಸ್ತಾಪಿಸಿರುವಂತೆ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಕರ್ನಾಟಕ ಸರ್ಕಾರದ ನಿಯಮಾವಳಿಗಳು – 2012 ಜಾರಿಗೆ ಬಂದಿರುವುದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿದೆ. ಇದರ ಪ್ರಕಾರ ಕರ್ನಾಟಕ ರಾಜ್ಯದಲ್ಲಿನ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪೋಷಕ ಪ್ರತಿನಿಧಿಗಳ ಸಂಖ್ಯೆಯನ್ನು 9ರಿಂದ 13ಕ್ಕೆ ಏರಿಕೆ ಮಾಡಲು ಉಲ್ಲೇಖ (2)ರ ತಿದ್ದುಪಡಿ ಆದೇಶದಲ್ಲಿ ತಿಳಿಸಲಾಗಿತ್ತು. ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ – 2009ರ ಪ್ರಕಾರ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪೋಷಕ ಪ್ರತಿನಿಧಿಗಳ ಸಂಖ್ಯೆ 13ರ ಬದಲು 18 ಇರಬೇಕು (ಒಟ್ಟು ಸದಸ್ಯರ 75%ರಷ್ಟು ಪೋಷಕ ಪ್ರತಿನಿಧಿಗಳಿರಬೇಕು ಎಂಬ ನಿಯಮದಂತೆ) ಎಂದು ಉಲ್ಲೇಖ (1)ರ ತಿದ್ದುಪಡಿ ಆದೇಶದಲ್ಲಿ ತಿಳಿಸಲಾಗಿದೆ. ಹಾಗಾಗಿ ಸದರಿ ಉಲ್ಲೇಖ (1)ರ ತಿದ್ದುಪಡಿ ಆದೇಶದ ಪ್ರತಿಯನ್ನು ಲಗತ್ತಿಸಿ ಮುಂದಿನ ಕ್ರಮಕ್ಕಾಗಿ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ಇವರುಗಳಿಗೆ ಕಳುಹಿಸಿಕೊಡಲಾಗುತ್ತಿದೆ.

ಅದರಂತೆ ಈಗಾಗಲೇ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಮೂರು ವರ್ಷ ಅವಧಿ ಪೂರೈಸಿರುವ ಎಸ್.ಡಿ.ಎಂ.ಸಿಗಳನ್ನು ಈ ತಿದ್ದುಪಡಿ ಆದೇಶದಂತೆ ಹೊಸದಾಗಿ ರಚಿಸಬೇಕಾಗುತ್ತದೆ ಮತ್ತು ಮೂರು ವರ್ಷ ಅವಧಿ ಪೂರೈಸದೇ ಇರುವ ಎಸ್.ಡಿ.ಎಂ.ಸಿಗಳಿಗೆ ಈಗಾಗಲೇ ಇರುವ 13 ಜನ ಪೋಷಕ ಸದಸ್ಯರ ಜೊತೆಗೆ ಹೆಚ್ಚುವರಿಯಾಗಿ ಸೇರಿಸಬೇಕಾದ 5 ಜನ ಪೋಷಕ ಪ್ರತಿನಿಧಿಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು, 18 ಜನ ಪೋಷಕ ಪ್ರತಿನಿಧಿಗಳು 3 ಜನ ನಾಮ ನಿರ್ದೇಶಿತ ಸದಸ್ಯರು ಮತ್ತು 3 ಜನ ಪದನಿಮಿತ್ತ ಸದಸ್ಯರುಗಳಿರುವಂತೆ ಪುನರ್‌ರಚಿಸುವುದು.

ಈ ಪ್ರಕ್ರಿಯೆಯು 31.07.2015ರೊಳಗೆ ಪೂರ್ಣಗೊಂಡು ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ 24 ಸದಸ್ಯರ ಎಸ್.ಡಿ.ಎಂ.ಸಿ ಇರುವಂತೆ ನೋಡಿಕೊಳ್ಳುವುದು ಆಯಾ ಹಂತದ ಅಧಿಕಾರಿಗಳ ಕರ್ತವ್ಯ ವಾಗಿದೆ. ತಮ್ಮ ಜಿಲ್ಲಾ ವ್ಯಾಪ್ತಿಯ ಎಲ್ಲಾ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಈ ತಿದ್ದುಪಡಿ ಆದೇಶದಂತೆ ಎಸ್.ಡಿ.ಎಂ.ಸಿ ಗಳು ರಚನೆಯಾಗಿರುವ ಬಗ್ಗೆ ಉಪನಿರ್ದೇಶಕರು(ಆಡಳಿತ) ರವರು ಖಾತ್ರಿ ಪಡಿಸಿಕೊಂಡು ಈ ಕೆಳಗಿನ ನಮೂನೆಯಲ್ಲಿ ಮಾಹಿತಿಯನ್ನು ಎಸ್ಎಸ್ಎ ಕಛೇರಿಗೆ ದಿನಾಂಕ: 15.08.2013ರೊಳಗೆ ಕಳುಹಿಸಿಕೊಡಲು ಈ ಮೂಲಕ ಸೂಚಿಸಿದೆ.

ಜಿಲ್ಲೆಯ ಹೆಸರು:

| ಕ್ರ.ಸಂ | ಬ್ಲಾಕ್‌ನ ಹೆಸರು | ಇರುವ ಒಟ್ಟು ಪ್ರಾಥಮಿಕ ಶಾಲೆಗಳ ಸಂಖ್ಯೆ | 3 ವರ್ಷ ಪೂರೈಸಿದ್ದರಿಂದ ಹೊಸದಾಗಿ 24 ಸದಸ್ಯರ ಸಮಿತಿ ರಚನೆಯಾದ ಶಾಲೆಗಳ ಸಂಖ್ಯೆ | 3 ವರ್ಷ ಪೂರೈಸದೇ ಇದ್ದದ್ದರಿಂದ ಹೊಸದಾಗಿ 5 ಸದಸ್ಯರ ಸೇರ್ಪಡೆಗೊಳಿಸಿದ ಶಾಲೆಗಳ ಸಂಖ್ಯೆ |
|---|---|---|---|---|
| 1 | | | | |
| 2 | | | | |
| ಒಟ್ಟು | | | | |

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ
ಬೆಂಗಳೂರು

ಗೆ,

1. ರಾಜ್ಯದ ಎಲ್ಲಾ ಜಿಲ್ಲೆಗಳ ಉಪನಿರ್ದೇಶಕರು (ಆಡಳಿತ) ಮತ್ತು ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ.

ಪ್ರತಿಯನ್ನು,

1. ಮಾನ್ಯ ಕಾರ್ಯದರ್ಶಿಗಳು ಪ್ರಾ & ಪ್ರೌ ಶಿಕ್ಷಣ ಇಲಾಖೆ ರವರ ಆದ್ಯ ಗಮನಕ್ಕೆ
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರ ಆದ್ಯ ಗಮನಕ್ಕೆ
3. ನಿರ್ದೇಶಕರು, ಡಿ.ಎಸ್.ಇ.ಆರ್.ಟಿರವರಿಗೆ ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ.
4. ರಾಜ್ಯದ ಎಲ್ಲಾ ಬ್ಲಾಕ್‌ಗಳ ಬಿಇಓಗಳಿಗೆ ಉಪನಿರ್ದೇಶಕರು(ಆಡಳಿತ) ಇವರುಗಳ ಮುಖಾಂತರ
5. ಕಛೇರಿ ಪ್ರತಿ.

KTG

# ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 256 ಪಿಬಿಎಸ್ 2014.

ಕರ್ನಾಟಕ ಸರ್ಕಾರ ಸಚಿವಾಲಯ,
ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:29/01/2015.

## ತಿದ್ದುಪಡಿ

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ 2009 ಹಾಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು 2012 ನಮ್ಮ ರಾಜ್ಯದಲ್ಲಿ ಜಾರಿಯಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ ಪಂಚಾಯತ್‌ಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು (ಮಾದರಿ) ಉಪವಿಧಿಗಳು 2006 ರ ಉಪವಿಧಿ–3(ಬಿ) ಗೆ ಸಂಖ್ಯೆ:ಇಡಿ 256 ಪಿಬಿಎಸ್ 2014; ದಿನಾಂಕ:30/12/2014 ರಲ್ಲಿ ತಿದ್ದುಪಡಿಯನ್ನು ಹೊರಡಿಸಲಾಗಿದ್ದು, ಸದರಿ ತಿದ್ದುಪಡಿಯಲ್ಲಿನ ಕೋಷ್ಟಕದ ಕ್ರಮ ಸಂಖ್ಯೆ:01 ರ ಕಂಬಸಾಲು–4 ರಲ್ಲಿ 'ಒಟ್ಟು 23 ಸ್ಥಾನಗಳ ಪೈಕಿ 12 ಸ್ಥಾನಗಳು' ಎಂದಿರುವುದನ್ನು "ಒಟ್ಟು 24 ಸ್ಥಾನಗಳ ಪೈಕಿ 12 ಸ್ಥಾನಗಳು" ಎಂದು ಹಾಗೂ ಕ್ರಮ ಸಂಖ್ಯೆ:2 ರ ಕಂಬಸಾಲು–4 ರಲ್ಲಿ 'ಹದಿನೇಳು ಮಂದಿ ಚುನಾಯಿತ ಪ್ರತಿನಿಧಿಗಳ ಪೈಕಿ' ಎಂದು ಇರುವುದನ್ನು "ಹದಿನೆಂಟು ಮಂದಿ ಚುನಾಯಿತ ಪ್ರತಿನಿಧಿಗಳ ಪೈಕಿ" ಎಂದು ತಿದ್ದಿ ಓದಿಕೊಳ್ಳುವುದು.

(ಆರ್.ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರಾಥಮಿಕ)

ಇವರಿಗೆ:

1. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು– ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 1,000 ಪ್ರತಿಗಳನ್ನು ಒದಗಿಸಲು ಕೋರಲಾಗಿದೆ
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ
6. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ / ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
7. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್
8. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ / ಪ್ರೌಢ ಶಿಕ್ಷಣ / ಉರ್ದು ಮತ್ತು ಇತರ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

# ಕರ್ನಾಟಕ ಸರ್ಕಾರ

ಸಂಖ್ಯೆ:ಇಡಿ 256 ಪಿಬಿಎಸ್ 2014.

ಕರ್ನಾಟಕ ಸರ್ಕಾರ ಸಚಿವಾಲಯ,
ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:30/12/2014.

## ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ:ಇಡಿ 122 ಪಿಬಿಎಸ್ 2004; ದಿನಾಂಕ:14/06/2006 ರಲ್ಲಿ ಕರ್ನಾಟಕ ಸರ್ಕಾರವು ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 1993 ರ (1993 ರ ಕರ್ನಾಟಕ ಅಧಿನಿಯಮ ಸಂಖ್ಯೆ:14) 58(1-ಎ), (ವಿ), 58(2), 60 ಮತ್ತು ಪ್ರಕರಣ 61(2)(ಬಿ) ಪ್ರಕರಣಗಳೊಂದಿಗೆ ಓದಲಾದ ಸದರಿ ಅಧಿನಿಯಮದ 316 ನೇ ಪ್ರಕರಣದ (1) ನೆಯ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಗ್ರಾಮ ಪಂಚಾಯತ್‌ಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ (ಮಾದರಿ) ಉಪವಿಧಿಗಳು, 2006 ರಲ್ಲಿ ಉಪವಿಧಿಗಳನ್ನು ರಚಿಸಲಾಗಿತ್ತು.

ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ 2009 ಹಾಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ನಿಯಮಗಳು 2012 ನಮ್ಮ ರಾಜ್ಯದಲ್ಲಿ ಜಾರಿಯಾಗಿರುವ ಹಿನ್ನೆಲೆಯಲ್ಲಿ ಕರ್ನಾಟಕ ಗ್ರಾಮ ಪಂಚಾಯತ್‌ಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು (ಮಾದರಿ) ಉಪವಿಧಿಗಳು 2006 ರಲ್ಲಿ ಇರುವ ಕೆಳಕಂಡ ಉಪವಿಧಿ ಸಂಖ್ಯೆಯ ಮುಂದೆ ಇರುವ ಕ್ರಮ ಸಂಖ್ಯೆ:03 ರಲ್ಲಿ ಇರುವ ಉಪವಿಧಿಗಳನ್ನು ಕ್ರಮ ಸಂಖ್ಯೆ:04 ರಲ್ಲಿ ನಮೂದಿಸಿರುವಂತೆ ಓದಿಕೊಂಡು ಕ್ರಮವಹಿಸುವುದು. **ಈ ಕೆಳಕಂಡ ಉಪ ವಿಧಿಗಳನ್ನು ಹೊರತುಪಡಿಸಿ ಉಳಿದಂತೆ ಕರ್ನಾಟಕ ಗ್ರಾಮಪಂಚಾಯತ್‌ಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪವಿಧಿಗಳು 2006 ಈ ಮಾದರಿ ಉಪ ವಿಧಿಗಳು ಯಥಾವತ್ ಮುಂದುವರೆಯುತ್ತವೆ:**

| ಕ್ರಸಂ | ಉಪವಿಧಿ ಸಂಖ್ಯೆ | ಆರ್.ಟಿ .ಇ.ಕಾಯಿದೆ ಹಿನ್ನೆಲೆಯಲ್ಲಿ ಬದಲಾವಣೆಯಾದ ವಿವರಗಳು | ಆರ್.ಟಿ .ಇ.ಕಾಯಿದೆ ಹಿನ್ನೆಲೆಯಲ್ಲಿತಿದ್ದುಪಡಿಯಾಗಬೇಕಾದ ವಿವರಗಳು |
|---|---|---|---|
| *1* | *2* | *3* | *4* |
| 1 | 3.ಬಿ | 1. ತಂದೆ-ತಾಯಿಯರ ಪರಿಷತ್ತು, ತಮ್ಮ ಪೈಕಿ ಹದಿಮೂರು ಜನಪ್ರತಿನಿಧಿಗಳನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ ಆಯ್ಕೆ ಮಾಡತಕ್ಕದ್ದು.<br>2. ಇವರ ಜೊತೆಗೆ ಶಾಲೆಯ ಮುಖ್ಯ ಶಿಕ್ಷಕರು, ಆರೋಗ್ಯ ಕಾರ್ಯಕರ್ತ ಮತ್ತು ಅಂಗನವಾಡಿ ಶಿಕ್ಷಕಿ ಇವರು ಪದನಿಮಿತ್ತ ಸದಸ್ಯರಾಗಿರತಕ್ಕದ್ದು.<br>3. ಉಳಿದ ಮೂವರು ಸದಸ್ಯರನ್ನು ಈ ಕೆಳಕಾಣಿಸಿದವರ ಪೈಕಿ ನಾಮ ನಿರ್ದೇಶನ ಮಾಡತಕ್ಕದ್ದು:<br>(ಅ) ಸ್ಥಳೀಯ ಜನ ಪ್ರತಿನಿಧಿ ಗಳ ಪೈಕಿ ಒಬ್ಬರನ್ನು ಸ್ಥಳೀಯ ಪ್ರಾಧಿಕಾರ ಆಯ್ಕೆ ಮಾಡತಕ್ಕದ್ದು.<br>(ಆ) ಶಾಲೆಯ ಶಿಕ್ಷಕರ ಪೈಕಿ | 1. ತಂದೆ-ತಾಯಿಯರ ಪರಿಷತ್ತು, ತಮ್ಮ ಪೈಕಿ **ಹದಿನೆಂಟು** ಜನಪ್ರತಿನಿಧಿಗಳನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ ಆಯ್ಕೆ ಮಾಡತಕ್ಕದ್ದು.<br>2. ಇವರ ಜೊತೆಗೆ ಶಾಲೆಯ ಮುಖ್ಯ ಶಿಕ್ಷಕರು, ಆರೋಗ್ಯ ಕಾರ್ಯಕರ್ತ ಮತ್ತು ಅಂಗನವಾಡಿ ಶಿಕ್ಷಕಿ ಇವರು ಪದನಿಮಿತ್ತ ಸದಸ್ಯರಾಗಿರತಕ್ಕದ್ದು.<br>3. ಉಳಿದ ಮೂವರು ಸದಸ್ಯರನ್ನು ಈ ಕೆಳಕಾಣಿಸಿದವರ ಪೈಕಿ ನಾಮನಿರ್ದೇಶನ ಮಾಡತಕ್ಕದ್ದು.<br>(ಅ) ಸ್ಥಳೀಯ ಜನ ಪ್ರತಿನಿಧಿಗಳ ಪೈಕಿ ಒಬ್ಬರನ್ನು ಸ್ಥಳೀಯ ಪ್ರಾಧಿಕಾರ ಆಯ್ಕೆ ಮಾಡತಕ್ಕದ್ದು.<br>(ಆ) ಶಾಲೆಯ ಶಿಕ್ಷಕರ ಪೈಕಿ |

| | | | |
|---|---|---|---|
| | | ಒಬ್ಬರನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು ನಾಮ ನಿರ್ದೇಶನ ಮಾಡುವುದು.<br>5.ಶಾಲೆಯ ಒಬ್ಬ ವಿದ್ಯಾರ್ಥಿಯನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು ನಾಮ ನಿರ್ದೇಶನ ಮಾಡತಕ್ಕದ್ದು.<br>ಒಟ್ಟು 19 ಸ್ಥಾನಗಳ ಪೈಕಿ 10 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲು ಇಡತಕ್ಕದ್ದು. ಜೊತೆಗೆ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಮತ್ತು ದುರ್ಬಲ ವರ್ಗದವರಿಗೆ ಸೂಕ್ತ ಪ್ರಾತಿನಿಧ್ಯವನ್ನು ನೀಡತಕ್ಕದ್ದು. | ಒಬ್ಬರನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು ನಾಮ ನಿರ್ದೇಶನ ಮಾಡುವುದು.<br>5.ಶಾಲೆಯ ಒಬ್ಬ ವಿದ್ಯಾರ್ಥಿಯನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು ನಾಮ ನಿರ್ದೇಶನ ಮಾಡತಕ್ಕದ್ದು.<br>ಒಟ್ಟು **23** ಸ್ಥಾನಗಳ ಪೈಕಿ **12** ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡತಕ್ಕದ್ದು. ಜೊತೆಗೆ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡ ಮತ್ತು ದುರ್ಬಲ ವರ್ಗದವರಿಗೆ ಸೂಕ್ತ ಪ್ರಾತಿನಿಧ್ಯವನ್ನು ನೀಡತಕ್ಕದ್ದು. |
| 2 | 12 | 12 **ಕೋರಂ–**<br>ಎ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆಯನ್ನು ನಡೆಸುವುದಕ್ಕೆ ಅಗತ್ಯವಾದ ಕೋರಂ ಈ ಮುಂದಿನಂತಿರತಕ್ಕದ್ದು:<br>i.ಅಧ್ಯಕ್ಷ ಅಥವಾ ಉಪಾಧ್ಯಕ್ಷರೂ ಸೇರಿದಂತೆ ತಂದೆ–ತಾಯಿಯರ ಪರಿಷತ್ತಿನ ಹದಿಮೂರು ಮಂದಿ ಚುನಾಯಿತ ಪ್ರತಿನಿಧಿಗಳ ಪೈಕಿ ಕನಿಷ್ಠಪಕ್ಷ ಏಳು ಸದಸ್ಯರು ಹಾಜರಿರತಕ್ಕದ್ದು. ಚುನಾಯಿತ ಪ್ರತಿನಿಧಿಗಳ ಪೈಕಿ ಕನಿಷ್ಠಪಕ್ಷ ಐದು ಮಂದಿ ಸದಸ್ಯರು<br>ii.ಪದನಿಮಿತ್ತಸದಸ್ಯರಲ್ಲಿ ಒಬ್ಬರು ಮತ್ತು ನಾಮ ನಿರ್ದೇಶಿತ ಸದಸ್ಯರಲ್ಲಿ ಇಬ್ಬರು ಹಾಜರಿರತಕ್ಕದ್ದು, ಅವರ ಪೈಕಿ ವಿದ್ಯಾರ್ಥಿಯ ಹಾಜರಾತಿ ಕಡ್ಡಾಯ. | 12 **ಕೋರಂ–**<br>ಎ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆಯನ್ನು ನಡೆಸುವುದಕ್ಕೆ ಅಗತ್ಯವಾದ ಕೋರಂ ಈ ಮುಂದಿನಂತಿರತಕ್ಕದ್ದು:<br>i.ಅಧ್ಯಕ್ಷ ಅಥವಾ ಉಪಾಧ್ಯಕ್ಷರೂ ಸೇರಿದಂತೆ ತಂದೆ–ತಾಯಿಯರ ಪರಿಷತ್ತಿನ **ಹದಿನೇಳು** ಮಂದಿ ಚುನಾಯಿತ ಪ್ರತಿನಿಧಿಗಳ ಪೈಕಿ ಕನಿಷ್ಠಪಕ್ಷ **ಒಂಭತ್ತು** ಸದಸ್ಯರು ಹಾಜರಿರತಕ್ಕದ್ದು.<br>ii. ಪದನಿಮಿತ್ತ ಸದಸ್ಯರಲ್ಲಿ ಒಬ್ಬರು ಮತ್ತು ನಾಮ ನಿರ್ದೇಶಿತ ಸದಸ್ಯರಲ್ಲಿ ಇಬ್ಬರು ಹಾಜರಿರತಕ್ಕದ್ದು. ಅವರ ಪೈಕಿ ವಿದ್ಯಾರ್ಥಿ ಹಾಜರಾತಿ ಕಡ್ಡಾಯ. |

(ಆರ್.ಸೋಮಶೇಖರ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಪ್ರಾಥಮಿಕ)

ಇವರಿಗೆ:

1. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು– ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಿ 1,000 ಪ್ರತಿಗಳನ್ನು ಒದಗಿಸಲು ಕೋರಲಾಗಿದೆ
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
4. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ
5. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ
6. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ / ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
7. ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು / ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್
8. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ / ಪ್ರೌಢ ಶಿಕ್ಷಣ / ಉರ್ದು ಮತ್ತು ಇತರ ಅಲ್ಪಸಂಖ್ಯಾತ ಭಾಷಾ ಶಾಲೆಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು